**ಸಾಕ್ಷಿಯನ್ನು ದಿಃ 17.02.2023 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ಕ್ರಯಪತ್ರವನ್ನು ಹಾಜರು ಪಡಿಸಿದ್ದು ಅನ್ನು ನಿಡಿ. 35 ಎಂದು ಗುರುತಿಸಲಾಯಿತು. ಸದರಿ ಕ್ರಯಪತ್ರವನ್ನು ದಿಃ 31.01.1998 ರಂದು ಮರಿದೇವಮ್ಮ ರವರು ನನಗೆ ಬರೆದುಕೊಟ್ಟಿರುತ್ತಾರೆ. 20,000/- ರುಪಾಯಿಗೆ ಕ್ರಯ ಮಾಡಿರುತ್ತಾರೆ. ಸದರಿ ಕ್ರಯಪತ್ರವನ್ನು ಮೈಸೂರಿನ ತಾಲ್ಲೂಕು ಆಫೀಸಿನಲ್ಲಿ ಬರೆಯಿಸಿರುತ್ತೇವೆ. ಸದರಿ ಕ್ರಯಪತ್ರ ಆಗುವಾಗ ಮರಿದೇವಮ್ಮ, ಅವರ ಯಜಮಾನರಾದ ರಾಮೇಗೌಡ, ಮರಿದೇವಮ್ಮ ರವರ ಅಕ್ಕಂದಿರಾದ ಚಿಕ್ಕತಾಯಮ್ಮ ಮತ್ತು ದೇವಮ್ಮ ಇದ್ದರ. ಊರಿನ ಮುಖಂಡರಾದ ಶಿವನಂಜಪ್ಪ ರವರು ಇದ್ದರು, ಸದರಿಯವರು ಈಗ ತೀರಿಹೋಗಿರುತ್ತಾರೆ. ಸೋಸಿಗೌಡ ಎನ್ನುವವರು ಸಹ ಇದ್ದರು. ಕ್ರಯಪತ್ರವನ್ನು ರಮ್ಮನಹಳ್ಳಿ ಗ್ರಾಮದವರು ಬರೆದಿರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ, ಸದರಿಯವರು ತೀರಿಹೋಗಿರುತ್ತಾರೆ. ಮರಿದೇವಮ್ಮ ನವರು ಕ್ರಯಪತ್ರಕ್ಕೆ ಹೆಬ್ಬೆಟ್ಟು ಹಾಕಿರುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ಕೋರಿದ್ದು, ನೀಡಲಾಯಿತು)

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.